(ಸದನವು ಸಂಜೆ 5 ಗಂಟೆ 55 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 9ನೇ ಮಾರ್ಚ್ ಮಾಹೆ 2010ರ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಃಶ್ಚಯಿಸಿತು)

ಅನುಬಂಧ – I

ಮಂಗಳೂರು ತಾಲ್ಲೂಕಿನಲ್ಲಿ 11ಇ ನಕ್ಷೆಯಿಂದ ತೊಂದರೆ

211 ಶ್ರೀ ಅಭಯಚಂದ್ರ ಜೈನ್ ಕೆ. (ಮೂಡಬಿದ್ರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ತಾಲ್ಲೂಕಿನಲ್ಲಿ 11ಇ ನಕ್ಷೆಯಿಂದಾಗಿ ಆಗುತ್ತಿರುವ ತೊಂದರೆ ಮತ್ತು ನೀಡಿರುವ ನಕ್ಷೆಯಂತೆ ಪಹಣಿ ಬದಲಾವಣೆ ಕಾರ್ಯ ನಡೆಯುತ್ತಿಲ್ಲ ಎಂಬುದಾಗಿ ಈ ಬಗ್ಗೆ ಸಾರ್ವಜನಿಕರು ಪ್ರತಿಭಟನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹೌದು.

ಆ) ಭೂಮಿ ಮತ್ತು 11ಇ ನಕ್ಷೆ ಯೋಜನೆ ಅನುಷ್ಠಾನದ ಸಮಯದಲ್ಲಿ ಸಾರ್ವಜನಿಕರಿಂದ ಕೆಲವು ದೂರುಗಳು ಸ್ವೀಕೃತವಾಗಿರುತ್ತವೆ. ಸಾರ್ವಜನಿಕರ ದೂರುಗಳನ್ನು ಆಧರಿಸಿ ಅವರಿಗೆ ಆಗುತ್ತಿರುವ ಈ ಸಮಸ್ಯೆಗಳನ್ನು ಬಗೆಹರಿಸಲು ಸ್ಥಳೀಯ ಶಾಸಕರು ಮತ್ತು ಜಿಲ್ಲಾಧಿಕಾರಿಯವರ ಜೊತೆ ಒಂದು ಸಭೆ ಕರೆದು ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು.

ಮಂಗಳೂರಿನ ಭೂ ನ್ಯಾಯ ಮಂಡಳಿಯ ಕಡತಗಳ ವಿಲೇವಾರಿ ಬಗ್ಗೆ :

3 (213) ಶ್ರೀ ಅಭಯ ಚಂದ್ರ ಜೈನ್.ಕೆ. (ಮೂಡಬಿದ್ರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಮಂಗಳೂರು ತಾಲ್ಲೂಕಿನ ಭೂ ನ್ಯಾಯ ಮಂಡಳಿಯಲ್ಲಿದ್ದ ಕಡತಗಳೆಷ್ಟು? ಹಾಗೂ ತನಿಖೆಗೆ ಬಂದ ಹೊಸ ಕಡತಗಳಲ್ಲಿ ವಿಲೇವಾರಿಯಾದ ಕಡತಗಳ ಸಂಖ್ಯೆ ಎಷ್ಟು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಮಂಗಳೂರು ತಾಲ್ಲೂಕಿನ ಯಾವುದೇ ಮೂಲ ಪ್ರಕರಣಗಳು ಭೂ ನ್ಯಾಯ ಮಂಡಳಿಯಲ್ಲಿ ತನಿಖೆಗೆ ಬಾಕಿ ಇರುವುದಿಲ್ಲ. ಆದರೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಿಂದ ಕಳೆದ 3 ವರ್ಷಗಳಲ್ಲಿ ರಿಮಾಂಡ್ ಆದ ಕಡತಗಳ ವಿವರ ಈ ಕೆಳಗಿನಂತಿದೆ:

ಮಂಗಳೂರು ಭೂ ನ್ಯಾಯ ಮಂಡಳಿ	: 243
ಮೂಡಬಿದ್ರೆ ಭೂ ನ್ಯಾಯ ಮಂಡಳಿ	: 71
ಒಟ್ಟು	**: 314**

ವಿಲೇವಾರಿಯಾದ ಕಡತಗಳ ಸಂಖ್ಯೆ

ಮಂಗಳೂರು ಭೂ ನ್ಯಾಯ ಮಂಡಳಿ	: 17
ಮೂಡಬಿದ್ರೆ ಭೂ ನ್ಯಾಯ ಮಂಡಳಿ	: 06
ಒಟ್ಟು	: 23

ಮೂಡಬಿದ್ರೆ ಕ್ಷೇತ್ರದಲ್ಲಿ ಕೆರೆಗಳ ಹೂಳೆತ್ತುವ ಬಗ್ಗೆ :

2 (212) ಶ್ರೀ ಅಭಯಚಂದ್ರ ಜೈನ್ ಕೆ. (ಮೂಡಬಿದ್ರೆ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದರೆ ವಿಧನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಕೆರೆಗಳಲ್ಲಿ ಹೆಚ್ಚಿನ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಕೆರೆಗಳ ಹೂಳನ್ನು ತೆಗೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಮೂಡಬಿದರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನಿರ್ವಹಿಸಲ್ಪಡುವ ಕೆರೆಗಳು ಇರುವುದಿಲ್ಲ.

ಆ) ಅನ್ವಯಿಸುವುದಿಲ್ಲ.